ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿ (ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ರಾಜ್ಯಪಾಲರಿಂದ ಪುನರ್ ಪರಿಗಣನೆಗೆ ಹಿಂದಿರುಗಿಸಲ್ಪಟ್ಟಂತೆ) 2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯ ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು)

2. ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ 2012.

ಅಧ್ಯಕ್ಷರು : ಈಗ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2012.

ಶ್ರೀ ಕೆ.ಎಸ್. ಈಶ್ವರಪ್ಪ (ಉಪಮುಖ್ಯಮಂತ್ರಿಗಳು, ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು (ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ನಿನ್ನೆ present ಆಗಿದೆ. Explain ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ (ಉಪಮುಖ್ಯಮಂತ್ರಿಗಳು, ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು) : ಇದು ಯಾವ ರೀತಿ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಭೂಮಿಯಲ್ಲಿ ಏನು ಸೈಟ್‌ಗಳಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ, ಅದೇ ರೀತಿ ನಗರ ಪ್ರದೇಶದಲ್ಲಿ ಗುಡಿಸಿಲಿನಲ್ಲಿ ವಾಸ ಮಾಡುತ್ತಿರುವಂಥ.....

ಶ್ರೀ ಸಿದ್ದರಾಮಯ್ಯ : ಬೇಡ. ನಗರ ಪ್ರದೇಶಗಳಿಗೆ ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ : ಏಕೆ ಬೇಡ?

ಶ್ರೀ ಸಿದ್ದರಾಮಯ್ಯ : ಹಳ್ಳಿಗಳಲ್ಲಿ ಸಾಕು. ಅಲ್ಲೆಲ್ಲ land grabbers ಇರುತ್ತಾರೆ. ಈಗ introduce ಮಾಡಲಿ. ನಾಳೆ ತೆಗೆದುಕೊಳ್ಳೋಣ ಮಾನ್ಯ ಅಧ್ಯಕ್ಷರೆ. ನಾವು ಓದಿಕೊಂಡು ಬರುತ್ತೇವೆ. ಒಂದು ಆಗಿದೆಯಲ್ಲ?

ಶ್ರೀ ಕೆ.ಎಸ್. ಈಶ್ವರಪ್ಪ : ಅಲ್ಲ, ದಯವಿಟ್ಟು, ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಈಗ introduce ಮಾಡಲಿ. Considerationಗೆ ನಾಳೆ ಬರಲಿ. ನಗರ ಪ್ರದೇಶಗಳಿಗೂ ಅದೇ ತರಹ ಮಾಡಬಾರದು. ಅಲ್ಲಿ ಹಳ್ಳಿಯವರು ಬಡವರು, ಪಾಪ ಅವರಿಗೆ ಏನೂ ಗೊತ್ತಿಲ್ಲ. ಇಲ್ಲಿ ಎಂಥೆಂಥ ತಿಮಿಂಗಿಲಗಳು ಇವೆ. ನೀವು ಇದನ್ನು ಮಾಡಿಬಿಟ್ಟರೆ flood gate open ಮಾಡಿದ ಹಾಗಾಗುತ್ತದೆ. ಬೇಡ. ನಾಳೆ ಮಾಡೋಣ. ಈಗ ಅವರು introduce ಮಾಡಲಿ.

ಅಧ್ಯಕ್ಷರು : ನಿನ್ನೆಯೇ introduce ಆಗಿದೆ.

ಶ್ರೀ ಸಿದ್ದರಾಮಯ್ಯ : ಎಲ್ಲಿ ಆಗಿದೆ?

ಅಧ್ಯಕ್ಷರು : ನಿನ್ನೆಯೇ ಆಗಿದೆ.

ಶ್ರೀ ಸಿದ್ದರಾಮಯ್ಯ : ಇಲ್ಲ ನಿನ್ನೆ ಆಗಿಲ್ಲ.

ಅಧ್ಯಕ್ಷರು : ಆಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ಪರ್ಯಾಲೋಚನೆಗೆ ಬಂದಿದೆ.

ಶ್ರೀ ಸಿದರಾಮಯ್ಯ : ಹಾಗಾದರೆ ನಾಳೆ ಮಾಡೋಣ. ಈಗ ಬೇರೆ ಬಿಲ್‌ಗಳನ್ನು ತೆಗೆದುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಿನ್ನೆನೂ ಸಹ ತಾವು ಹೇಳಿದ ಹಾಗೆ ಕೇಳಿದ್ದೇನೆ. ನಿನ್ನೆ ತಾವು ಏನು ತೀರ್ಮಾನ ಮಾಡಿದ್ದೀರಿ ಆ ಪ್ರಕಾರ ಮಾಡಬೇಕಾಗಿದೆ.

ಅಧ್ಯಕ್ಷರು : ಇವತ್ತು ಎಂದು ಹೇಳಿದ್ದೆ.

ಶ್ರೀ ಸಿದ್ದರಾಮಯ್ಯ : ನಾಳೆ ಎಂದು ಹೇಳಿದ್ದೇವೆ, Co-operate ಮಾಡುತ್ತಲೇ ಇದ್ದೇವೆ. ಆದರೂ ನಮ್ಮ ಮಾತಿಗೆ ಸ್ವಲ್ಪವೂ ಬೆಲೆಯ ಇರುವುದಿಲ್ಲವಲ್ಲ? ನಿನ್ನೆ ಮಾಡಿಕೊಡುತ್ತೇವೆಂದು ಹೇಳಿದ್ದೆವು, ಈಗ ಮಾಡಿ ಕೊಡಲಿಲ್ಲವೆ? ಒಪ್ಪಿದ್ದೇವೆ, ನಾಳೆ ಮಾಡುತ್ತೇವೆ. ಚರ್ಚೆ ಮಾಡೋಣ ಈಶ್ವರಪ್ಪನವರೆ,

ಶ್ರೀ ಕೆ.ಎಸ್. ಈಶ್ವರಪ್ಪ : ಖಂಡಿತವಾಗಿ ಚರ್ಚೆ ಮಾಡೋಣ. ನಾನು ಬೇಡ ಎನ್ನುವುದಿಲ್ಲ. ಇಷ್ಟೊತ್ತು ಚರ್ಚೆಯಾಗಿದ್ದು ನನಗೆ ಬಹಳ ಸಂತೋಷ. ಮತ್ತೂ ಚರ್ಚೆಯಾಗಲಿ ಇವತ್ತೇ ಚರ್ಚೆಯಾಗಲಿ. ಏಕೆಂದರೆ, ನಾಳೆ ಒಂದೇ ದಿನ ಇರುವುದು.

ಶ್ರೀ ಸಿದ್ದರಾಮಯ್ಯ : ಅದು ಕೌನ್ಸಿಲ್‌ಗೆ ಹೋಗಿ ಬಂದಿತ್ತು. ರಾಜ್ಯಪಾಲರಿಗೆ ಕಳುಹಿಸಿದ್ದರು. ಅದರ ಮೇಲೆ ಅಷ್ಟೊಂದು ಚರ್ಚೆ ಇರಲಿಲ್ಲ. ರಾಜ್ಯಪಾಲರಿಗೆ ಕಳುಹಿಸಿದ್ದೇವೆ ಎನ್ನುವ ಕಾರಣಕ್ಕೆ ಚರ್ಚೆ ಮಾಡಿದ್ದೇವೆ ಅಷ್ಟೇ.

ಶ್ರೀ ಕೆ.ಎಸ್. ಈಶ್ವರಪ್ಪ : ನಾಳೆ ಒಂದು ದಿವಸ ಇರುವುದು ಇಲ್ಲಿ ಚರ್ಚೆಯಾಗಿ ಪಾಸಾಗಿ ಮತ್ತೆ ಅಲ್ಲಿಗೆ ಹೋಗಿ ಬರಬೇಕು. ಒಂದೇ ದಿನದಲ್ಲಿ ಇದು ಮುಗಿಯಲಿಲ್ಲವೆಂದರೆ ತುಂಬಾ ತಡವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಅದು ಏನಾಗುವುದಿಲ್ಲ. ನಾಳೆ ಮಾಡೋಣ. ಪ್ಲೀಸ್ ನಮ್ಮ ರಿಕ್ವೆಸ್ಟ್ ಸ್ವಲ್ಪ ಕನ್ಸಿಡರ್ ಮಾಡಬೇಕು.

ಶ್ರೀ ಕೆ. ರಘುಪತಿ ಭಟ್ : ನಗರ ಪ್ರದೇಶದ ಬಡಬಗ್ಗರಿಗೆ ಅನುಕೂಲವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ರೀ ಕುಳಿತುಕೊಳ್ಳಿ. ಹೌದು, ಹೌದು, ನಾವು ನಗರ ಪ್ರದೇಶದಲ್ಲಿ ವಾಸವಾಗಿರುವುದು. ನಾನು ಬೆಂಗಳೂರು–ಮೈಸೂರಿ

ನಲ್ಲಿಯೇ ವಾಸವಾಗಿರುವುದು ನೀವೊಬ್ಬರೇ ಅಲ್ಲ. ಎಲ್ಲಾ ಲೂಟಿ ಹೊಡೆದು ಬಿಡುತ್ತಾರೆ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಮ್ಮ ವಿನಂತಿ. ನಾಳೆ ಆಗದಿದ್ದರೆ ತೊಂದರೆಯಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಆಯಿತು, ನಾಳೆ ನೋಡೋಣ. ಆಯಿತು, ಅವರು ಕುಳಿತುಕೊಂಡಿದ್ದಾರೆ ನೀವೇ ಎತ್ತಿ ಕಟ್ಟುತ್ತೀರಲ್ಲ?

ಅಧ್ಯಕ್ಷರು : ನಾನು ಎತ್ತಿ ಕಟ್ಟುತ್ತಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ವಿರೋಧ ಪಕ್ಷದ ನಾಯಕರೆ, ನಿಮ್ಮ ಸ್ಟೈಲಿಗೆ ಯಾರ್ಯಾರು ಕುಳಿತುಕೊಳ್ಳಬೇಕೋ ಹಾಗೆ ಕೂಡಿಸಿಬಿಟ್ಟರಿ.. ನಿಜಕ್ಕೂ ಅವರು ಹಾಗೇ ಕುಳಿತುಕೊಂಡಿದ್ದು.

ಶ್ರೀ ಸಿದ್ದರಾಮಯ್ಯ : He is a very good man, you don't know.

ಶ್ರೀ ಕೆ.ಎಸ್. ಈಶ್ವರಪ್ಪ : ಅದಕ್ಕೋಸ್ಕರ ಅವರು ಒಪ್ಪಿಕೊಂಡರು, ಅವರು ಒಳ್ಳೆಯ ಮನುಷ್ಯರು.

ಶ್ರೀ ಸಿದ್ದರಾಮಯ್ಯ : ಒಳ್ಳೆಯ ಮನುಷ್ಯರು ಮಾತ್ರ ಹಾಗೆ ಒಪ್ಪಿಕೊಳ್ಳುವುದು. ನೀವು ನೋಡಿ ಒಪ್ಪುವುದೇ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ನಿನ್ನೆ ಒಪ್ಪಿಲ್ಲವೆ?

ಶ್ರೀ ಸಿದ್ದರಾಮಯ್ಯ : ಈಗಲೂ ಒಪ್ಪಿ.

ಶ್ರೀ ಕೆ.ಎಸ್. ಈಶ್ವರಪ್ಪ : ಈಗಲೂ ಒಪ್ಪುತ್ತೇನೆ, ನನ್ನ ಸಮಸ್ಯೆ ಏನೆಂದರೆ, ರಾಜ್ಯದ ನಗರ ಪ್ರದೇಶದಲ್ಲಿ ವಾಸ ಮಾಡುವ ಬಡವರಿಗೆ ನಾಳೆ ಒಂದು ದಿನವೇ ಅವಕಾಶ.

ಶ್ರೀ ಸಿದ್ದರಾಮಯ್ಯ : ಎಷ್ಟೋ ವರ್ಷದಿಂದ ಇದ್ದಾರೆ, ಈಗೇನೂ ಅವರನ್ನು evict ಮಾಡಿಬಿಡುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : Evict ಮಾಡುವುದಿಲ್ಲ. ಆದರೆ ಬಡವರು ಮನೆಗಳನ್ನು ಕಟ್ಟುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಪರವಾಗಿಲ್ಲ. ನಾಳೆ ಮಾಡೋಣ.

ಶ್ರೀ ಅರವಿಂದ ಲಿಂಬಾವಳಿ : ನಗರ ಪ್ರದೇಶಗಳಲ್ಲೂ ಬಡವರಿರುತ್ತಾರೆ. ಭೂಗಳ್ಳರಿಗೆ ಏಕೆ ಹೆದರುತ್ತೀರಿ?

ಶ್ರೀ ಸಿದ್ದರಾಮಯ್ಯ : ನಾಳೆ ಮಾಡೋಣ. ನಾಳೆ ಅದರಲ್ಲೇನಿದೆ ಎಂದು ನೋಡಿಕೊಂಡು ಬರುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ನೋಡಿಕೊಂಡು ಬನ್ನಿ, ನಾನೇನೂ ಬೇಡ ಎನ್ನುವುದಿಲ್ಲ. ನಿಮಗೆ ಅನ್ಯಾಯ ಮಾಡುವುದಕ್ಕೆ ನಾವೇನು ಯೋಚನೆ ಮಾಡುತ್ತೇವೆಯೇ? ಬಡವರ ಪರ ಬಂದಾಗ ನೀವು ನಾವು ಒಂದೇ.

ಶ್ರೀ ಸಿದ್ದರಾಮಯ್ಯ : ನಾವೂ ಬಡವರ ಪರವಾಗಿಯೇ ಇರುವುದು. ಈ Assembly ಇರುವುದೇ ಬಡವರ ಪರ ಕೆಲಸ ಮಾಡುವುದಕ್ಕೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇಷ್ಟರವರೆಗೆ ಎಲ್ಲಾ ಸಹಕಾರ ಕೊಟ್ಟಿದ್ದೀರಿ. ನಗರ ಪ್ರದೇಶಕ್ಕೆ ಸಂಬಂಧಿಸಿದ್ದನ್ನು ಮಾಡುವುದಕ್ಕೆ ಸಹಕರಿಸಿ.

ಶ್ರೀ ಸಿದ್ದರಾಮಯ್ಯ : ನಾಳೆ we will definitely co-operate with you.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ವಿರೋಧ ಪಕ್ಷದ ನಾಯಕರೆ, ನಗರ ಪ್ರದೇಶದಲ್ಲಿ ಈಗಾಗಲೇ ಮನೆ ಕಟ್ಟಿಕೊಂಡು ವಾಸಿಸುತ್ತಿರುವವರು ಬಹಳಷ್ಟು ಜನರಿದ್ದಾರೆ.

ಶ್ರೀ ಸಿದ್ದರಾಮಯ್ಯ : Let us discuss tomorrow.

ಶ್ರೀ ಕೆ. ರಘುಪತಿ ಭಟ್ : ನಾಳೆ ಮತ್ತೆ ವಿಧಾನ ಪರಿಷತ್ತಿಗೆ ಹೋಗಿ ಆಗದಿದ್ದರೆ ಏನು ಮಾಡುವುದು? ವಿದಾನ ಪರಿಷತ್ತಿಗೆ ಹೋಗಿ ಬರಲು late ಆಗುತ್ತದೆ. ದಯವಿಟ್ಟು ಇವತ್ತು ಚರ್ಚೆ ಮಾಡಿ. ಖಾದರ್‌ರವರೇ, ವಿರೋಧ ಪಕ್ಷದ ನಾಯಕರಿಗೆ ಸ್ವಲ್ಪ ಹೇಳಿ. ನಾಳೆ ಮತ್ತೆ late ಆಗುತ್ತದೆ. ವಿಧಾನ ಪರಿಷತ್ತಿಗೆ ಹೋಗಿ ಬರಬೇಕು.

ಶ್ರೀ ಸಿದ್ದರಾಮಯ್ಯ : ನಾಳೆಗೆ ಒಪ್ಪಿಕೊಳ್ಳಲು ಇವರಿಗೆಲ್ಲ ಹೇಳಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರಿಗೆ ನಾಳೆಗೆ ಒಪ್ಪಿಕೊಳ್ಳಲು ಹೇಳಿದ್ದೀರಿ. ನಾನು ನಿಮ್ಮನ್ನು ಈಗಲೇ ಒಪ್ಪಿಕೊಳ್ಳಿ ಎಂದು request ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : Please, ನಾಳೆ ಮಾಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಸರ್, ಇದು ವಿಧಾನ ಪರಿಷತ್ತಿಗೆ ಬೇರೆ ಹೋಗಬೇಕು.

ಶ್ರೀ ಸಿದ್ದರಾಮಯ್ಯ : ಪರವಾಗಿಲ್ಲ, ನಾಳೆ ಬೆಳಗ್ಗೆಯೇ ಮಾಡಿಕೊಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ದಯವಿಟ್ಟು ಹೀಗೆ ಮಾಡಿ, ನಾಳೆ Assembly ಆರಂಭವಾಗುತ್ತಿದ್ದಂತೆ first ಮಾಡಿ. ಆನಂತರ ಬೇರೆ ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಾಳೆ Question Hour ಆದ ಮೇಲೆ ಮಾಡೋಣ, ಮಾನ್ಯ ಅಧ್ಯಕ್ಷರೆ.

ಶ್ರೀ ಕೆ.ಎಸ್. ಈಶ್ವರಪ್ಪ : Question Hourಗೆ ಮೊದಲು ಮಾಡಿ, ಸರ್.

ಅಧ್ಯಕ್ಷರು : ನಾಳೆ Question Hour ಇಲ್ಲ.

ಶ್ರೀ ಸಿದ್ದರಾಮಯ್ಯ : Question Hour ಇಲ್ಲವೇ? ಆಯಿತು. ಹಾಗಾದರೆ ನಾಳೆ ಮಾಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : First ಇದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ.

ಶ್ರೀ ಕೆ.ಎಸ್. ಈಶ್ವರಪ್ಪ : Thank you.

ಶ್ರೀ ಸಿದ್ದರಾಮಯ್ಯ : ಇದಕ್ಕೆಲ್ಲ ಅವಕಾಶ ಮಾಡಿ ಕೊಡಿ. ನೀವು ಉತ್ತರ ಕರ್ನಾಟಕದ್ದೇ ಚರ್ಚೆ ಮಾಡುವುದನ್ನು ಬಿಟ್ಟುಬಿಡುತ್ತೀರಲ್ಲ? ನಿನ್ನೆ ಅವರು ಉತ್ತರ ಕೊಟ್ಟಿಲ್ಲ. ಎಲ್ಲಿ ಕೊಟ್ಟರು?

ಅಧ್ಯಕ್ಷರು : ಎಲ್ಲವನ್ನೂ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಇನ್ನೂ incomplete discussion. ಮಾಡಬೇಕೋ ಬೇಡವೋ? ಒಂದು issue ವನ್ನಾದರೂ ಚರ್ಚೆ ಮಾಡದೇ